**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ, ನ್ಯಾಯಾಲಯ, ಕುಣಿಗಲ್.**

**ಸಿ.ಸಿ.ನಂ.5240/2023**

PW -01
CW-03

ಸಾಕ್ಷಿದಾರನ ಹೆಸರುಃ- ಚಿಕ್ಕಣ್ಣ
ತಂದೆಯ ಹೆಸರು ಓಬಳಯ್ಯ
ವಯಸ್ಸು 50 ವರ್ಷ
ಉದ್ಯೋಗ ಕೂಲಿ
ವಾಸ ಬೋರಲಿಂಗನಪಾಳ್ಯ

**ಸಾಕ್ಷಿಗೆ ದಿಃ 12.08.2025 ರಂದು ಪ್ರಮಾಣ ವಚನ ಬೋದಿಸಲಾಯಿತು.**
**ಮುಖ್ಯ ವಿಚಾರಣೆಃ- ಮಾನ್ಯ ಸ.ಸ.ಅ ರವರಿಂದ.**

ಸಾಕ್ಷಿಯು ಪಂಚನಾಮೆಯಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿ.ಪಿ.1 ಎಂದು ನಿ.ಪಿ.1(ಎ) ಎಂದು ಗುರುತಿಸಲಾಯಿತು. 6-7 ವರ್ಷಗಳ ಹಿಂದೆಅಮ್ಮತೂರು ದೇವಸ್ಥಾನದ ಹತ್ತಿರ ಸಹಿ ಮಾಡಿರುತ್ತೇನೆ. ಆ ಸಮಯ 2 ರಿಂದ 2.30 ಗಂಟೆ ಆಗಿತ್ತು. ಆ ದಿನ ನನ್ನ ಜೊತೆ ಯಾರು ಇರಲಿಲ್ಲ. ಪಂಚನಾಮೆಯಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ನನ್ನ ಸಮಕ್ಷಮ ಏನನ್ನು ಜಪ್ತು ಮಾಡಿಕೊಂಡಿರುವುದಿಲ್ಲ. ನಾನು ಪೋಲಿಸರ ಮುಂದೆ ಹೇಳಿಕೆ ನೀಡಿರುವುದಿಲ್ಲ. ಮಾದರಿ ಸೀಲಿನ ನಕಲಿನ ಮೇಲೆ ನನ್ನ ಸಹಿ ಇರುತ್ತದೆ ಅದನ್ನು ನಿ.ಪಿ 2 ಎಂದು ಸಹಿಯನ್ನುನಿ.ಪಿ 2(ಎ) ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಮಾನ್ಯ ಸ.ಸ.ಅ ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲಿಗಾಗಿ ನ್ಯಾಯಾಲಯದ ಅನುಮತಿಯನ್ನು ಕೋರಿರುತ್ತಾರೆ. ಅನುಮತಿಸಲಾಗಿದೆ.)**
**ಪಾಟೀ ಸವಾಲುಃ- ಮಾನ್ಯ ಸ.ಸ.ಅ ರವರಿಂದ.**

ದಿಃ 15.04.2019 ರಂದು ಮದ್ಯಾಹ್ನ 12.40 ಗಂಟೆಯ ಸಮಯದಲ್ಲಿ ಚಾಸಾ 1 ಅವರು ಅವರ ಸಿಬ್ಬಂದಿಯೊಂದಿಗೆ ಗಸ್ತು ಮಾಡುತ್ತಿದ್ದಾಗ ಆರೋಪಿ ತನ್ನ ದ್ವಿ ಚಕ್ರ ವಾಹನದಲ್ಲಿ 6.840 ಲೀಟರ್ ಮದ್ಯವನ್ನು ಅಕ್ರಮವಾಗಿ ಸಾಗಾಟ ಮಾಡುತ್ತಿದ್ದು ಅಭಕಾರಿ ಪೊಲಿಸರು ನನ್ನನ್ನು ಮತ್ತು ಚಾಸಾ 2 ಅವರನ್ನು ಪಂಚರಾಗಿ ಬರಮಾಡಿಕೊಂಡು ನಮ್ಮ ಸಮಕ್ಷಮ ಮು. ಮಾ. ಜಪ್ತು ಮಾಡಿರುತ್ತಾರೆ ಎಂದರೆ ಸರಿಯಲ್ಲ. ರಾಸಾಯನಿಕ ಪರೀಕ್ಷೆಗೆ ಮು. ಮಾ. ಗಳನ್ನು ನನ್ನ ಸಮಕ್ಷಮ ತಗೆದು ಸೀಲ್ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಮು. ಮಾ. ಗಳೊಂದಿಗೆ ಹೊಂಡಾ ಆಕ್ಟಿವಾ ಕಂಪನಿಯ ದ್ವಿ ಚಕ್ರವಾಹನ ಕೆ.ಎ 04-ಜೆ.ಕ್ಯೂ- 2948 ಅನ್ನು ಸಹ ವಶಕ್ಕೆ ಪಡೆರುತ್ತಾರೆ ಎಂದರೆ ಸರಿಯಲ್ಲ. ಮು. ಮಾ ಗಳ ಮೇಲೆ ನನ್ನ ಸಹಿ

ಇರುತ್ತದೆ ಎಂದರೆ ಸರಿಯಲ್ಲ. ಪಂಚನಾಮೆಯನ್ನು ಬೆಳಿಗ್ಗೆ 11 ರಿಂದ ಮದ್ಯಾಹ್ನ 1.45 ಗಂಟೆಯವರೆಗೆ ಮಾಡಿರುತ್ತಾರೆ ಎಂದರೆ ಸರಿಯಲ್ಲ.

ದಿಃ 17.06.2019 ರಂದು ನಾನು ನನ್ನ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿ.ಪಿ 3 ಎಂದು ಗುರುತಿಸಲಾಯಿತು. ನನ್ನ ಸಮಕ್ಷಮ ಪಂಚನಾಮೆ ಮಾಡಿ ಮು. ಮಾ. ಗಳನ್ನು ಜಪ್ತು ಮಾಡಿಕೊಂಡಿದ್ದರು ಸಹ ನಾನು ಆರೋಪಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ.

**ಸಹಿ/-**

**ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.**

**ಕುಣಿಗಲ್.**